# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1291

ಮಾನ್ಯ ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ .ಎಸ್
(ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 21.08.2025

ಉತ್ತರಿಸುವ ಸಚಿವರು : ಗೃಹ ಸಚಿವರು.

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>2023, 2024 ಮತ್ತು 2025 ಜುಲೈ ಅಂತ್ಯದವರೆಗೆ ರಾಜ್ಯದಲ್ಲಿ ನಡೆದಿರುವ ಕೊಲೆ, ಪೋಕ್ಸೋ ಅತ್ಯಾಚಾರ, ಹಲ್ಲೆ, ಎನ್.ಡಿ.ಪಿ.ಎಸ್ (ಡ್ರಗ್ಸ್) ಮಹಿಳೆಯರ ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಸೈಬರ್ ಅಪರಾಧಗಳು, ವಿವಿಧ ರೀತಿಯ ವಂಚನೆಗಳು, ರಾಬರಿಗಳು, ಡಕಾಯಿತಿ, ದೇಶದ್ರೋಹದ ಪ್ರಕರಣ ಗಳು, ದೇಶದ್ರೋಹದ ಘೋಷಣೆ ಪ್ರಕರಣಗಳು ಧರ್ಮಾಧಾರಿತ ಪ್ರಕರಣ ಗಳು, ಬಾಂಬ್ ಸ್ಫೋಟ ಹಾಗೂ ಇತ್ಯಾದಿ ದಾಖಲಾದ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು).</td><td>2023, 2024 ಮತ್ತು 2025 ಜುಲೈ ಅಂತ್ಯದವರೆಗೆ ರಾಜ್ಯದಲ್ಲಿ ನಡೆದಿರುವ ಕೊಲೆ, ಪೋಕ್ಸೋ ಅತ್ಯಾಚಾರ, ಹಲ್ಲೆ, ಎನ್.ಡಿ.ಪಿ.ಎಸ್ (ಡ್ರಗ್ಸ್) ಮಹಿಳೆಯರ ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಸೈಬರ್ ಅಪರಾಧಗಳು, ವಿವಿಧ ರೀತಿಯ ವಂಚನೆಗಳು, ರಾಬರಿಗಳು, ಡಕಾಯಿತಿ, ದೇಶದ್ರೋಹದ ಪ್ರಕರಣಗಳು, ದೇಶದ್ರೋಹದ ಘೋಷಣೆ ಪ್ರಕರಣಗಳು, ಧರ್ಮಾಧಾರಿತ ಪ್ರಕರಣಗಳು, ಬಾಂಬ್ ಸ್ಫೋಟ ಹಾಗೂ ಇತ್ಯಾದಿ ದಾಖಲಾದ ವಿವರಗಳು ಈ ಕೆಳಕಂಡಂತಿರುತ್ತದೆ:-
<table>
<tr><th>ಕ್ರ ಸಂ</th><th>ಪ್ರಕರಣ</th><th>2023 ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ</th><th>2024 ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ</th><th>2025 ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ (ದಿನಾಂಕ: 31.07.2025ರ ಅಂತ್ಯದ ವರೆಗೆ</th></tr>
<tr><td>1</td><td>ಕೊಲೆ ಪ್ರಕರಣ</td><td>1,291</td><td>1,203</td><td>717</td></tr>
<tr><td>2</td><td>ಪೋಕ್ಸೋ</td><td>3,902</td><td>4,064</td><td>2,544</td></tr>
<tr><td>3</td><td>ಅತ್ಯಾಚಾರ ಪ್ರಕರಣ</td><td>600</td><td>739</td><td>549</td></tr>
<tr><td>4</td><td>ಹಲ್ಲೆ</td><td>10,790</td><td>10,125</td><td>6,207</td></tr>
<tr><td>5</td><td>ಎನ್‌ಡಿಪಿಎಸ್</td><td>6,767</td><td>4,188</td><td>3,530</td></tr>
<tr><td>6</td><td>ಲೈಂಗಿಕ ದೌರ್ಜನ್ಯ ಪ್ರಕರಣ</td><td>6,489</td><td>6,334</td><td>3,450</td></tr>
<tr><td>7</td><td>ಸೈಬರ್ ಅಪರಾಧ</td><td>22,253</td><td>22,472</td><td>8,620</td></tr>
<tr><td>8</td><td>ವಿವಿಧ ರೀತಿಯ ವಂಚನೆಗಳು</td><td>6,927</td><td>6,560</td><td>3,349</td></tr>
<tr><td>9</td><td>ರಾಬರಿಗಳು</td><td>1,877</td><td>1,607</td><td>618</td></tr>
<tr><td>10</td><td>ಡಕಾಯಿತಿ</td><td>314</td><td>271</td><td>119</td></tr>
</table>
</td></tr>
</table>

| | | | | |
|---|---|---|---|---|
| 11 | ದೇಶದ್ರೋಹದ ಪ್ರಕರಣಗಳು | 0 | 0 | 1 |
| 12 | ದೇಶದ್ರೋಹದ ಘೋಷಣೆ ಪ್ರಕರಣಗಳು | 1 | 2 | 2 |
| 13 | ಧರ್ಮಾಧಾರಿತ ಪ್ರಕರಣಗಳು, | 36 | 37 | 21 |
| 14 | ಬಾಂಬ್ ಸ್ಫೋಟ | 0 | 1 | 0 |

| | | |
|---|---|---|
| (ಆ) | ಅಪರಾಧ ತಡೆಗೆ ಪೊಲೀಸರಿಂದ ಒತ್ತು ನೀಡುವ ಕೆಲಸ ಆಗುತ್ತಿದೆಯೇ; ಹೆಚ್ಚಿನ ಬೀಟ್ ವ್ಯವಸ್ಥೆ ಜಾರಿಯಾಗಿದೆಯೇ; ಅಪರಾಧಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಆಗುತ್ತಿದೆಯೇ; ಸರ್ಕಾರವು ಸಮಾಜಘಾತುಕ ಶಕ್ತಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದು ಕೊಳ್ಳಲಾಗುತ್ತಿದೆಯೇ?<br>(ಸಂಪೂರ್ಣ ಮಾಹಿತಿ ನೀಡುವುದು) | **ಅಪರಾಧ ತಡೆಗೆ ಕೈಗೊಂಡಿರುವ ಸೂಕ್ತ ಕಾನೂನು ಕ್ರಮಗಳು ಈ ಕೆಳಕಂಡಂತಿವೆ:-**<br>1. ರಾಜ್ಯದಾದ್ಯಂತ ಈ ಬೀಟ್ ಸಿಸ್ಟಮ್ **(E-beat System)** ಅನ್ನು ಅಳವಡಿಸಲಾಗಿದೆ.<br>2. 30 ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಅಪರಾಧ **(Addl.SP, Crime-2)** ಹುದ್ದೆಗಳನ್ನು ಸೃಜಿಸಲಾಗಿದೆ.<br>3. ತನಿಖಾ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ **206 Scene of Crime (SOCO)** ಅಧಿಕಾರಿಗಳನ್ನು ನೇಮಿಸಿ ಎಲ್ಲಾ ಘಟಕಗಳಿಗೆ ನಿಯೋಜಿಸಲಾಗಿದೆ.<br>4. ರಾತ್ರಿ ಗಸ್ತಿನಲ್ಲಿ ಅಪರಿಚಿತ ವ್ಯಕ್ತಿಗಳ **(suspected persons)** ಬೆರಳು ಮುದ್ರೆಗಳನ್ನು ಸಂಗ್ರಹಿಸಲು ಒಟ್ಟು 2500 **Single Finger scanner** ಗಳನ್ನು ನೀಡಲಾಗಿದೆ. ಕಳೆದ 3 ವರ್ಷಗಳಲ್ಲಿ 12,032 ಅಪರಿಚಿತ ವ್ಯಕ್ತಿಗಳ **(suspected persons)** ಬೆರಳು ಮುದ್ರೆಗಳನ್ನು ಸಂಗ್ರಹಿಸಲಾಗಿದೆ. ಇದರಿಂದ ಅವರು ಅಪರಾಧಗಳಲ್ಲಿ ಭಾಗಿಯಾಗಿದ್ದಲ್ಲಿ ಸ್ಥಳದಲ್ಲಿಯೇ ಮಾಹಿತಿ ಪಡೆಯಲು ಸಹಕಾರಿಯಾಗಿದೆ.<br>5. ರಾಜ್ಯದಲ್ಲಿ ಮಹಿಳೆಯರ, ಮಕ್ಕಳ ಮತ್ತು ಹಿರಿಯ ನಾಗರೀಕರ ಸುರಕ್ಷತೆ ಸಂಬಂಧವಾಗಿ, ಮಹಿಳಾ ಸಹಾಯವಾಣಿ,(1091) ಮಕ್ಕಳ ಸಹಾಯವಾಣಿ(1098) ಮತ್ತು ಹಿರಿಯ ನಾಗರೀಕರ ಸಹಾಯವಾಣಿ (1090) ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿವೆ.<br>6. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯೊಂದಿಗೆ ಸಮನ್ವಯದಿಂದ ಕಾರ್ಯಾಚರಣೆ.<br>7. ನಾಗರೀಕರ ವಿವಿಧ ತುರ್ತು ಪರಿಸ್ಥಿತಿಗಳನ್ನು ಪರಿಹರಿಸಲು ಏಕ ತುರ್ತು ಸಂಖ್ಯೆ **(DIAL) 112 ERSS (Emergency Response Support System)** ತುರ್ತು ಪ್ರತಿಕ್ರಿಯ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. |

| | | |
|---|---|---|
| | | ಇದರಿಂದ ವರ್ಷಕ್ಕೆ ಸರಾಸರಿ 45 ಲಕ್ಷ ಕರೆಗಳನ್ನು ಸಾರ್ವಜನಿಕರಿಂದ ಸ್ವೀಕರಿಸಿ ಕ್ರಮವಹಿಸಲಾಗಿದೆ.<br><br>8. ಈ ವ್ಯವಸ್ಥೆಯ ಅಡಿಯಲ್ಲಿ ಒಟ್ಟು 704 ವಾಹನಗಳು ಕಾರ್ಯ ನಿರ್ವಹಿಸುತ್ತಿದ್ದು, ಕೂಡಲೇ ಕರೆಗಳಿಗೆ ಸ್ಪಂದಿಸಿ ಸ್ಥಳಕ್ಕೆ ಭೇಟಿ ನೀಡಲಾಗುತ್ತಿದೆ. ಈ ವ್ಯವಸ್ಥೆಯಿಂದ ಅತ್ಯಂತ ಕಡಿಮೆ ಅವಧಿಯಲ್ಲಿ ನಗರದಲ್ಲಿ ಕೇವಲ 5 ನಿಮಿಷ 56 ಸೆಕೆಂಡ್ ಮತ್ತು ಗ್ರಾಮೀಣ ಭಾಗದಲ್ಲಿ 18 ನಿಮಿಷಗಳಲ್ಲಿ ಕರೆ ಮಾಡಿದ ಸ್ಥಳಗಳಿಗೆ ಭೇಟಿ ನೀಡಲಾಗುತ್ತಿದೆ.<br><br>9. ರಾಜ್ಯದಲ್ಲಿ ಎಲ್ಲಾ ಪ್ರಮುಖ ನಗರಗಳು ಮತ್ತು ಉಪನಗರಗಳಲ್ಲಿ ಸಾರ್ವಜನಿಕ ಸುರಕ್ಷತೆ ಮತ್ತು ಅಪರಾಧಗಳನ್ನು ನಿಯಂತ್ರಿಸುವ ಸಂಬಂಧವಾಗಿ ಸಿಸಿಟಿವಿ ಕ್ಯಾಮೆರಾಗಳನ್ನು **(CCTV camera)** ಅಳವಡಿಸಲಾಗಿದೆ.<br><br>10 **Karnataka Public Safety (Measures) Enforcement Act 2017** ರ ಅಡಿಯಲ್ಲಿ ಎಲ್ಲಾ ವಾಣಿಜ್ಯ ಸಂಸ್ಥೆ, ಕೈಗಾರಿಕೆ ಸಂಸ್ಥೆ, ಧಾರ್ಮಿಕ ಸ್ಥಳಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳಲ್ಲಿ, ಈ ಅಧಿನಿಯಮದಂತೆ ಸಿಸಿಟಿವಿ ಕ್ಯಾಮೆರಾ ಅಳವಡಿಸಿರುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗಿದೆ.<br><br>11. ರಾಜ್ಯದಲ್ಲಿ ಅಪರಾಧ ತಡೆಗಟ್ಟಲು ಮತ್ತು ಕಾನೂನು ಸುವ್ಯವಸ್ಥೆ ನಿಯಂತ್ರಿಸಲು ಚರಿತ್ರೆ ಹಾಳೆ ಆಸಾಮಿ, ರೌಡಿ ಪಟ್ಟಿ ಆಸಾಮಿ, ರೂಡಿಗತ ಅಪರಾಧಿ, ಪೂರ್ವಸಜೆ ಆಸಾಮಿ, ಕಮ್ಯುನಲ್ ಗೂಂಡಾಗಳ ವಿರುದ್ಧ **BNSS/ CRPC** u/s 107,108,110 ಅಡಿಯಲ್ಲಿ ಪ್ರಕರಣ ನೋಂದಾಯಿಸಿ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಡುವ ಸಲುವಾಗಿ ಸದರಿಯವರುಗಳಿಂದ ಜಾಮೀನು ಮುಚ್ಚಳಿಕೆಯನ್ನು ಪಡೆದು ನಿಗಾವಹಿಸಿ ನಿಯಂತ್ರಣದಲ್ಲಿ ಇಡಲಾಗಿದೆ. ಪ್ರತಿ ವರ್ಷ ಈ ಸಂಬಂಧ ಸುಮಾರು 50,000 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ.<br><br>12. 1,58,146 ಎಮ್‌ಒಬಿ **(Modus Operandi)** ಆಸಾಮಿಗಳ ವಿರುದ್ಧ ದಾಖಲಾತಿಗಳನ್ನು ನಿರ್ವಹಣೆ ಮಾಡಿ ಅವರು ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ನಿಗಾವಹಿಸಲಾಗುತ್ತಿದೆ.<br><br>13. ಕರ್ನಾಟಕ ರಾಜ್ಯದಲ್ಲಿ ಒಟ್ಟು 250 ಹೆದ್ದಾರಿ ಗಸ್ತು ವಾಹನ **(Highway Patrolling Vehicle)** ಕರ್ತವ್ಯ |

| | | |
|---|---|---|
| | | ನಿರ್ವಹಿಸುತ್ತಿದ್ದು, ಹೆದ್ದಾರಿಗಳಲ್ಲಿ ರಾಜ್ಯದ ಸಾರ್ವಜನಿಕ ಸುರಕ್ಷತೆಗೆ ಶ್ರಮಿಸಲಾಗುತ್ತಿದೆ.<br>14. **'ಮನೆ ಮನೆ ಪೊಲೀಸ್' ಕಾರ್ಯಕ್ರಮ** – ಪ್ರತೀ ಬಿಟ್ ಪೊಲೀಸ್‌ರು ಮನೆ ಮನೆಗೆ ಭೇಟಿ, ಅಪರಾಧ ಜಾಗೃತಿ, ಮಾಸಿಕ ಸಭೆಗಳನ್ನು ನಡೆಸಲಾಗುತ್ತಿದೆ.<br>15. **ಸ್ಲಮ್ ಡೊಮಿನೇಶನ್ ಯೋಜನೆ** – ಹಳೆಯ ಅಪರಾಧಿಗಳ ಮೇಲ್ವಿಚಾರಣೆ ಮತ್ತು ಪುನರ್ವಸತಿ. |
| **(ಇ)** | ರಾಜ್ಯದಲ್ಲಿ ಹೆಚ್ಚಿನ ಅಪರಾಧ ಪ್ರಕರಣಗಳು ವರದಿಯಾಗುತ್ತಿದ್ದು ಸಮಾಜಘಾತುಕ ಶಕ್ತಿಗಳು ಅಟ್ಟಹಾಸ ಮೆರೆಯುತ್ತಿರುವುದರಿಂದ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಡುತ್ತಿದ್ದು ಪೂರ್ಣ ಪ್ರಮಾಣದಲ್ಲಿ ಕೈತಪ್ಪಿ ಹೋದಂತಾಗುವುದಿಲ್ಲವೇ? (ಸಂಪೂರ್ಣ ಮಾಹಿತಿ ನೀಡುವುದು); | **ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಗೆ <u>ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:-</u>**<br>1. ರಾಜ್ಯದ್ಯಾಂತ ಈ ಬೀಟ್ ಸಿಸ್ಟಮ್ (E-beat System) ಅನ್ನು ಅಳವಡಿಸಲಾಗಿದೆ.<br>2. ಕೊಲೆ ಪ್ರಕರಣಗಳು ವ್ಯಕ್ತಿಗಳ / ಗುಂಪುಗಳ ಮಧ್ಯದ ವೈಯಕ್ತಿಕ ದ್ವೇಷ ಮತ್ತು ಪ್ರತೀಕಾರದಿಂದ ಸಂಭವಿಸಬಹುದಾಗಿರುತ್ತವೆ. ಆದ್ದರಿಂದ ಈ ರೀತಿಯ ಮಾಹಿತಿ ದೊರೆತ ಕೂಡಲೇ ಪೊಲೀಸರು ಸೂಕ್ತ ಕ್ರಮಕೈಗೊಂಡು ಕೊಲೆ / ಹತ್ಯೆ ಘಟನೆಗಳು ಜರುಗದಂತೆ ನೋಡಿಕೊಳ್ಳಲಾಗುತ್ತಿದೆ.<br>3. ಬಹಳಷ್ಟು ಪ್ರಕರಣಗಳಲ್ಲಿ ದೂರು ಮತ್ತು ಪ್ರತಿ ದೂರು ಬಂದಂತಹ ಸಂದರ್ಭದಲ್ಲಿ ಎರಡು ದೂರುದಾರರು ಮತ್ತು ಪ್ರತಿ ದೂರುದಾರರಿಗೆ ತಿಳುವಳಿಕೆ ನೀಡಿ, ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಪಿಎಆರ್ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br>4. ಯಾವುದೇ ರೀತಿಯ ದೂರು ಬಂದಾಗಲೂ ಸಹ ದೂರನ್ನು ಕೂಲಂಕಷವಾಗಿ ಪರಿಶೀಲಿಸಿ ಪೊಲೀಸ್ ಠಾಣೆಯ ದಾಖಲಾತಿಯಲ್ಲಿ ನಮೂದಿಸಿ ಕ್ರಮಕೈಗೊಳ್ಳಲಾಗುತ್ತಿದೆ.<br>5. ಸಮಾಜದಲ್ಲಿ ಅಶಾಂತಿ ತೋರಿದ ವ್ಯಕ್ತಿಗಳನ್ನು ಕಾನೂನಿನ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಸಮಾಜದಲ್ಲಿ ಶಾಂತಿ ಕಾಪಾಡುವಂತೆ ಬಾಂಡ್‌ಗಳನ್ನು ಬರೆಸಿಕೊಳ್ಳಲಾಗುತ್ತಿದೆ. ಹಾಗೂ ಕೆಲವೊಂದು ಪ್ರಕರಣಗಳಲ್ಲಿ ಸಮಾಜಕ್ಕೆ ಅಶಾಂತಿ ತರುವಂತಹ ವ್ಯಕ್ತಿಗಳನ್ನು ಗಡಿಪಾರು ಮಾಡಲು ಹಾಗೂ ಗೂಂಡಾ ಕಾಯ್ದೆಯಡಿಯಲ್ಲಿ ಕ್ರಮಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.<br>6. ಯಾವುದೇ ರೀತಿಯ ಘಟನೆಗಳು ಜರುಗುವ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಘಟನಾ ಸ್ಥಳಕ್ಕೆ ಪೊಲೀಸರು ಅಧಿಕಾರಿಗಳು ತಲುಪುವ ಸಂಬಂಧ ಕರ್ನಾಟಕ ರಾಜ್ಯದಲ್ಲಿ ಇ.ಆರ್.ಎಸ್.ಎಸ್ (112) ವ್ಯವಸ್ಥೆಯನ್ನು ನಿರ್ವಹಿಸಲಾಗುತ್ತಿದೆ. |

| | | |
|---|---|---|
| | | 7. ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಪಿಂಕ್ ಹೊಯ್ಸಳ, ಮಹಿಳಾ ಠಾಣೆ, ಮಹಿಳಾ ವಿಶೇಷ ಪೊಲೀಸ್ ಪಡೆಗಳನ್ನು ಸ್ಥಾಪಿಸಲಾಗಿರುತ್ತದೆ.<br><br>8. ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲಾ ಮೀಟಿಂಗ್, ನಾಗರೀಕ ಸಮಿತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.<br><br>9. ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದೆ. ಸಾಮಾಜಿಕ ಜಾಲತಾಣಗಳ ನಿಗಾ ಘಟಕಗಳನ್ನು ಪೊಲೀಸ್ ಠಾಣಾ ಮಟ್ಟಕ್ಕೂ ವಿಸ್ತರಿಸಲಾಗಿದೆ.<br><br>10. ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಬೀಟ್ ಮತ್ತು ಗುಡ್ ಮಾರ್ನಿಂಗ್ ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗುತ್ತಿದ್ದು, ಕಾನೂನು ಉಲ್ಲಂಘಿಸಿದವರ ಮೇಲೆ ಕ್ರಮ ಜರುಗಿಸಲಾಗುತ್ತಿದೆ.<br><br>11. ಪ್ರಮುಖ ಹಬ್ಬದ ಆಚರಣೆಗಳ ಸಂದರ್ಭದಲ್ಲಿ ಎಲ್ಲಾ ಸಮುದಾಯಗಳ ಮುಖಂಡರುಗಳನ್ನು ಒಳಗೊಂಡ ಶಾಂತಿ ಸಭೆಗಳನ್ನು ಜಿಲ್ಲಾ ಮಟ್ಟದಲ್ಲಿ, ಉಪ-ವಿಭಾಗದ ಮಟ್ಟದಲ್ಲಿ ಮತ್ತು ಪೊಲೀಸ್ ಠಾಣೆ ಮಟ್ಟದಲ್ಲಿ ನಡೆಸಲಾಗುತ್ತಿದೆ.<br><br>12. ಗಲಭೆ ಪ್ರಕರಣಗಳಲ್ಲಿ ಭಾಗಿಯಾಗುವ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ರೀತ್ಯಾ ಕ್ರಮಗಳನ್ನು ಜರುಗಿಸಲಾಗುತ್ತಿರುತ್ತದೆ.<br><br>13. ಗುಪ್ತ ಮಾಹಿತಿ ಸಿಬ್ಬಂದಿ ಹಾಗೂ ಬೀಟ್ ಸಿಬ್ಬಂದಿಯವರ ಮೂಲಕ ಮುಂಗಡವಾಗಿ ಮಾಹಿತಿಯನ್ನು ಸಂಗ್ರಹಿಸಿ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಸೂಕ್ತ ಕ್ರಮ ಕೈಕೊಳ್ಳಲಾಗುತ್ತಿದೆ.<br><br>14. ದಿನದ 24 ಗಂಟೆಗಳ ಕಾಲ ಗಸ್ತು ಕರ್ತವ್ಯಕ್ಕಾಗಿ ಶಕ್ತಿ ಪೆಟ್ರೊಲಿಂಗ್, ಹೊಯ್ಸಳ ವಾಹನ ನಿಯಮಿತವಾಗಿ ನಿಯೋಜಿಸಲಾಗಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಂತಹ ರೌಡಿಗಳಿಗೆ ಕಠಿಣವಾದ ಎಚ್ಚರಿಕೆಗಳನ್ನು ನೀಡಿ, ಯಾವುದೇ ಕೃತ್ಯಗಳನ್ನು ಮಾಡಿದಾಗ ಅವರ ಮೇಲೆ ಆಗುವ ಪರಿಣಾಮಗಳ ಗಂಭೀರತೆಯ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಾಗಿರುತ್ತದೆ.<br><br>15. ಸಾಮಾಜಿಕ ಜಾಲ ತಾಣಗಳಲ್ಲಿ ಕೋಮು ಸೌಹಾರ್ದತೆ & ಕದಡುವ ವ್ಯಕ್ತಿಗಳನ್ನು ಗುರುತಿಸಿ ಅಂಥಹವರ ಮೇಲೆ ನಿಗಾ ಇಡಲಾಗುತ್ತಿದೆ. |

| | | |
|---|---|---|
| | | **ಅಪರಾಧಗಳನ್ನು ತಡೆಗಟ್ಟುವಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-**<br><br>1. ಡಿ.ಜಿ. ಮತ್ತು ಐಜಿಪಿ ರವರ ಸುತ್ತೋಲೆ ಸಂಖ್ಯೆ: L&O/MISC/205/2017 ದಿನಾಂಕ: 03.03.2017ರ ಆದೇಶದಂತೆ ಪ್ರತಿ ಮಾಹೆ ಠಾಣಾಧಿಕಾರಿಗಳು ತಮ್ಮ ಠಾಣಾ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಮಾದಕ ವಸ್ತುಗಳ ದುಷ್ಪರಿಣಾಮಗಳಿಂದಾಗುವ ಅನಾಹುತಕ್ಕೆ ಸಂಬಂಧಪಟ್ಟಂತೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ಶಾಲಾ ಕಾಲೇಜುಗಳ ಸುತ್ತಮುತ್ತ 100 ಯಾರ್ಡ್‌ಗಳ ಅಂತರದಲ್ಲಿ ಯಾವುದೇ ಮಾದಕ ವಸ್ತುಗಳನ್ನು ಮಾರಾಟ ಮಾಡದಂತೆ ಬೋರ್ಡ್‌ಗಳನ್ನು ಅಳವಡಿಸಿದ್ದು ಈಗಾಗಲೇ ಕೋಟ್ಪಾ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುತ್ತಿದೆ.<br>2. ಶಾಲಾ ಕಾಲೇಜುಗಳಲ್ಲಿ ಹೋಗಿ ಸೈಬರ್ ಕ್ರೈಂ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಸೈಬರ್ ಕ್ರೈಂ ಬಗ್ಗೆ ಬೀದಿ ನಾಟಕಗಳು, ಸೈಕಲ್ ಜಾಥ ಮಾಡುವುದು ಹಾಗೂ ಫೇಸ್ ಬುಕ್ ನಲ್ಲಿ ಸಾರ್ವಜನಿಕರಿಗೆ ಅರಿವುಮೂಡಿಸಲಾಗುತ್ತಿದೆ.<br>3. ಅಪರಾಧ ತಡೆಗಟ್ಟುವ ಸಂಬಂಧ ಮೈಸೂರು ನಗರ ಪೊಲೀಸ್ ಘಟಕದಲ್ಲಿ ಈಗಾಗಲೇ ನ್ಯೂ ಬೀಟ್ ವ್ಯವಸ್ಥೆ ಚಾಲ್ತಿಯಲ್ಲಿದ್ದು, ಪ್ರತೀ ತಿಂಗಳು 02 ಮೊಹಲ್ಲಾ ಸಭೆ ಮಾಡಲಾಗುತ್ತಿದೆ.<br>4. ನಾಗರೀಕ ಸಲಹಾ ಸಮಿತಿ ಮತ್ತು ಪರಿಶಿಷ್ಟ ಜಾತಿ ಪಂಗಡದ ಸಭೆಗಳಲ್ಲಿ ಅಪರಾಧ ತಡೆಗಟ್ಟುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಹಾಗೂ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಕಾರ್ಯಾಗಾರ ನಡೆಸಿ ಅಪರಾಧ ತಡೆಗಟ್ಟುವ ಬಗ್ಗೆ ತಿಳಿಸಿಕೊಡಲಾಗುತ್ತಿದೆ.<br>5. ಪ್ರತಿ ವರ್ಷ ಅಪರಾಧ ತಡೆ ಮಾಸಾಚಾರಣೆ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅಪರಾಧಗಳ ಕುರಿತು ಅರಿವು ಮೂಡಿಸಲಾಗುತ್ತಿದೆ.<br>6. ಬೀಟ್ ಸಿಬ್ಬಂದಿಗಳಿಂದ ಗುಪ್ತಚರ ಮಾಹಿತಿ ಕಲೆಹಾಕಿ ಅಪರಾಧಗಳನ್ನು ನಿಯಂತ್ರಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>7. ಇ.ಆರ್.ಎಸ್.ಎಸ್. 112 ಮೂಲಕ ಮಾಹಿತಿ ಕಲೆಹಾಕಿ ಅಪರಾಧಗಳನ್ನು ನಿಯಂತ್ರಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>8. ಹಗಲು, ರಾತ್ರಿ ಹಾಗೂ ಪೆಟ್ರೋಲಿಂಗ್ ಮೂಲಕ ಮಾಹಿತಿ ಸಂಗ್ರಹಿಸಿ ಕ್ರಮಕೈಗೊಳ್ಳಲಾಗುತ್ತಿದೆ. |

9. ಪ್ರತೀ ಮಾಹೆ ಶಾಂತಿ ಸಭೆ, ಯುವಜನ ಸಭೆ, ಜನಸಂಪರ್ಕ ಸಭೆ ಹಾಗೂ ಮೊಹಲ್ಲಾ ಸಭೆಗಳನ್ನು ಏರ್ಪಡಿಸಿ ಅಪರಾಧಗಳನ್ನು ತಡೆಗಟ್ಟಲು ಕ್ರಮಕೈಗೊಳ್ಳಲಾಗುತ್ತಿದೆ.

10. ಮುಂಜಾಗ್ರತಾ ಕ್ರಮವಾಗಿ ರೌಡಿ ಹಾಳೆ/ಗೂಂಡಾ ಕಾಯ್ದೆ ಮೂಲಕ ಆರೋಪಿಗಳ ವಿರುದ್ಧ ಕ್ರಮಕೈಗೊಳ್ಳಲಾಗುತ್ತಿದೆ.

11. ಭದ್ರತಾ ಪ್ರಕರಣಗಳನ್ನು ದಾಖಲಿಸಿ ಕಾನೂನು ಸುವ್ಯವಸ್ಥೆಯನ್ನು ಹದಗೆಡದಂತೆ ಕ್ರಮಕೈಗೊಳ್ಳಲಾಗಿದೆ.

12. ಅಪರಾಧ ನಿಯಂತ್ರಣ ಸಂಬಂಧ ಪಬ್ಲಿಕ್ ಸೇಫ್ಟಿ ಆಕ್ಟ್ ರೀತ್ಯ ಸಿ.ಸಿ ಕ್ಯಾಮೆರಾಗಳನ್ನು ಅಳವಡಿಸಿ ಅಪರಾಧ ನಿಯಂತ್ರಣಕ್ಕೆ ಕ್ರಮಕೈಗೊಳ್ಳಲಾಗಿದೆ.

13. ರಾತ್ರಿ ಗಸ್ತಿನ ಸಂದರ್ಭದಲ್ಲಿ ನಿಯೋಜಿಸಲಾದ ಸಿಬ್ಬಂದಿಗಳಿಂದ ಸಿ.ಸಿ.ಟಿ.ಎನ್.ಎಸ್. ಆಪ್ ಮೂಲಕ ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಅಂತಹವರನ್ನು ಚೆಕ್ ಮಾಡಿ ಕ್ರಮಕೈಗೊಳ್ಳಲಾಗುತ್ತಿದೆ.

14. ಸಾರ್ವಜನಿಕರು ದೂರು ನೀಡಿದ ತಕ್ಷಣ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗುತ್ತಿರುತ್ತದೆ.

**<u>ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ</u>** :-

1. ಬೆಂಗಳೂರು ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿ, ಮಹಿಳಾ ಸಹಾಯವಾಣಿ 1091 ಮತ್ತು ವನಿತಾ ಸಹಾಯವಾಣಿ 22943225 ಕಾರ್ಯ ನಿರ್ವಹಿಸುತ್ತಿರುತ್ತದೆ.

2. ದಿನದ 24 ಗಂಟೆಯೂ ಸಹ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ **"ಪಿಂಕ್ ಹೊಯ್ಸಳ"** ಮತ್ತು 112 ಗಸ್ತುವಾಹನಗಳು ಗಸ್ತು ಕಾರ್ಯ ನಿರ್ವಹಿಸುತ್ತಿವೆ.

3. ರಾಜ್ಯದ ಬೆಂಗಳೂರು ನಗರದಲ್ಲಿ ರಾಣಿ ಚೆನ್ನಮ್ಮ ಪಡೆ ಇತರೆ ಜಿಲ್ಲೆಗಳಾದ ಬಾಗಲಕೋಟೆ ಜಿಲ್ಲೆಯಲ್ಲಿ ಚೆನ್ನಮ್ಮ ಪಡೆ, ಬಳ್ಳಾರಿ ಜಿಲ್ಲೆಯಲ್ಲಿ ಓಬವ್ವ ಪಡೆ, ದಾವಣಗೆರೆ ಜಿಲ್ಲೆಯಲ್ಲಿ ದುರ್ಗಾ ಪಡೆ, ಗದಗ ಜಿಲ್ಲೆಯಲ್ಲಿ ಚೆನ್ನಮ್ಮ ಪಡೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶರಾವತಿ ಓಬ್ಬವ್ವ ಪಡೆ, ಬೀದರ್ ಜಿಲ್ಲೆಯಲ್ಲಿ ರಾಣಿ ಚೆನ್ನಮ್ಮ ಪಡೆ ವಾಹನವು ಹೆಚ್ಚಾಗಿ ಮಹಿಳೆಯರು ಓಡಾಡುವ ಜನನಿಬಿಡ ಸ್ಥಳಗಳಲ್ಲಿ ಹಾಗೂ ಶಾಲಾ ಕಾಲೇಜುಗಳ ಬಳಿ ಹೆಚ್ಚಿನ ಗಸ್ತು ಕಾರ್ಯವನ್ನು ನಿರ್ವಹಿಸುತ್ತಿರುತ್ತದೆ.

4. ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ **"ವೀರವನಿತೆ"** ತಂಡವನ್ನು ರಚಿಸಿ, ಸದರಿಯವರಿಗೆ 6 ತಿಂಗಳು ನುರಿತ ತಜ್ಞರಲ್ಲಿ ಸ್ವಯಂ ರಕ್ಷಣೆ ಮತ್ತು ಮಾರ್ಷಲ್ ಆರ್ಟ್ಸ್ ಬಗ್ಗೆ ತರಬೇತಿ ನೀಡಿ, ನಂತರ ಸದರಿಯವರುಗಳನ್ನು 3 ತಂಡಗಳನ್ನಾಗಿ ರಚಿಸಿ

| | | |
|---|---|---|
| | | ಮೇಲಾಧಿಕಾರಿಗಳ ನೇತೃತ್ವದಲ್ಲಿ ನಗರದ ವಿವಿಧ ಶಾಲಾ-ಕಾಲೇಜುಗಳು ಮತ್ತು ಮಹಿಳೆಯರು ಹೆಚ್ಚಾಗಿ ಕೆಲಸ ನಿರ್ವಹಿಸುವ ಗಾರ್ಮೆಂಟ್ಸ್‌ಗಳು, ಮಾಲ್ ಮತ್ತಿತರ ಕಡೆಗಳಲ್ಲಿ ಸದರಿಯವರುಗಳಿಗೆ ಸ್ವಯಂ ರಕ್ಷಣೆಯ ಬಗ್ಗೆ ಮಾಹಿತಿ ಹಾಗೂ ತರಬೇತಿಗಳನ್ನು ನೀಡಲಾಗಿರುತ್ತದೆ.<br><br>**ಬೆಂಗಳೂರು ನಗರದಲ್ಲಿ "ಸೇಫ್ ಸಿಟಿ ಫಾರ್ ಸೇಫ್ಟಿ ಆಫ್ ವುಮೆನ್" ಯೋಜನೆಯಡಿ ಮಹಿಳೆಯರ ಸುರಕ್ಷತೆಯ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.**<br><br>1. ನಗರದ 3501 ಸ್ಥಳಗಳಲ್ಲಿ ಒಟ್ಟು 8876 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.<br>2. ವಿವಿಧ ಸ್ಥಳಗಳಲ್ಲಿ ಒಟ್ಟು 50 ಸೇಫ್ಟಿ ಐಲ್ಯಾಂಡ್‌ಗಳನ್ನು ಗುರುತಿಸಲಾಗಿದೆ.<br>3. ಒಂದು ಮೊಬೈಲ್ ಕಮಾಂಡ್ ಅಂಡ್ ಕಂಟ್ರೋಲ್ ವಾಹನ ಖರೀದಿಸಿದ್ದು, ಇದಕ್ಕೆ ಅಗತ್ಯವಿರುವ ಫ್ಯಾಬ್ರಿಕೇಷನ್ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.<br>4. ಒಟ್ಟು 560 ಬಾಡಿ ವೋರ್ನ್ ಕ್ಯಾಮೆರಾಗಳನ್ನು ಖರೀದಿಸಲಾಗಿದೆ.<br>5. ವಿವಿಧ ಸ್ಥಳಗಳಲ್ಲಿ 128 ವೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇವು ಕಾರ್ಯವನ್ನು ನಿರ್ವಹಣೆಯಲ್ಲಿವೆ.<br>6. 11 ಡ್ರೋನ್ ಕ್ಯಾಮೆರಾಗಳನ್ನು ಖರೀದಿಸಿ ಬಳಸಲಾಗುತ್ತಿದೆ.<br>7. ಸಂತ್ರಸ್ಥರ ಪರಿಹಾರ ನಿಧಿ ಅಡಿಯಲ್ಲಿ ನೊಂದ ಮಹಿಳಾ ಸಂತ್ರಸ್ಥರಿಗೆ ಸರ್ಕಾರದಿಂದ ನೀಡುವ ಸಹಾಯ ಧನವನ್ನು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದಿಂದ ಒದಗಿಸುತ್ತಿದ್ದು ಅದಕ್ಕೆ ಪೊಲೀಸ್ ಇಲಾಖೆ ವತಿಯಿಂದ ಅಗತ್ಯ ದಾಖಲೆಗಳನ್ನು ಒದಗಿಸಲಾಗುತ್ತಿದೆ.<br>8. 'ಮನೆ ಮನೆ ಪೊಲೀಸ್ ಕಾರ್ಯಕ್ರಮ'ದ ಮುಖಾಂತರ ಪೊಲೀಸರು ನೇರವಾಗಿ ಸಾರ್ವಜನಿಕರ ಮನೆಗೆ ತೆರಳಿ ಅವರ ದೂರುಗಳನ್ನಾಲಿಸಿ ಸ್ಪಂದಿಸುವ ಕೆಲಸ ನಡೆಯುತ್ತಿದೆ.<br>9. ಅಪರಾಧಗಳನ್ನು ತಡೆಗಟ್ಟಲು ಸಾರ್ವಜನಿಕರೊಂದಿಗೆ ಕೈಜೋಡಿಸಿ, ಜಾಗೃತಿ ಸಮಾಜದ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ಮುಖಾಂತರ ಮುಖ್ಯವಾಗಿ ಮಕ್ಕಳು, ಮಹಿಳೆಯರ ಹಾಗೂ ಹಿರಿಯ ನಾಗರೀಕರ ಸುಭದ್ರತೆಗೆ ಕ್ರಮಕೈಗೊಳ್ಳಲಾಗುತ್ತಿದೆ. |
| **(ಈ)** | ರಾಜ್ಯದಲ್ಲಿ ವಿವಿಧ ಸಂಘಟನೆಗಳ ವಿರುದ್ಧ ದಾಖಲಾದ ಪ್ರಕರಣಗಳೆಷ್ಟು: ಸಂಘಟನೆಗಳ ವಿರುದ್ಧ ಇಲ್ಲಿಯವರೆಗೆ ದಾಖಲಾದ ಪ್ರಕರಣಗಳನ್ನು 2023, | ರಾಜ್ಯದಲ್ಲಿ ವಿವಿಧ ಸಂಘಟನೆಗಳ ವಿರುದ್ಧ ದಾಖಲಾದ ಪ್ರಕರಣಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br><br>ಪ್ರಕರಣಗಳನ್ನು ಅಭಿಯೋಜನೆಯಿಂದ ಹಿಂಪಡೆಯುವ ಪ್ರಸ್ತಾವನೆಯು ನಿಯಮಾನುಸಾರ ಸರ್ಕಾರದ ಪರಿಶೀಲನೆಯಲ್ಲಿದೆ. |

| | | |
|---|---|---|
| | 2024 ಮತ್ತು 2025ನೇ ವರ್ಷದಲ್ಲಿ ಕೈಬಿಡುವ/ ಹಿಂಪಡೆಯುವ ವಿಷಯ ಸರ್ಕಾರದ ಮುಂದಿದೆಯೇ: ಇದ್ದಲ್ಲಿ ಎಷ್ಟು ಪ್ರಕರಣ ಗಳು ಮತ್ತು ಯಾವ ಯಾವ ಸಂಘಟನೆಗಳ ಪ್ರಕರಣ ಗಳನ್ನು ಕೈಬಿಡಲಾಗಿದೆ/ ಹಿಂಪಡೆಯಲಾಗಿದೆ? (ಮಾಹಿತಿ ನೀಡುವುದು). | |

ಸಂಖ್ಯೆ: ಹೆಚ್‌ಡಿ 37 ಎಸ್‌ಡಿಎನ್ 2025

**(ಡಾ: ಜಿ.ಪರಮೇಶ್ವರ)**

ಗೃಹ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕೇಶವ ಪ್ರಸಾದ್.ಎಸ್ ರವರು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1291 ರಾಜ್ಯದಲ್ಲಿ ವಿವಿಧ ಸಂಘಟನೆಗಳ ವಿರುದ್ಧ ದಾಖಲಾದ ಪ್ರಕರಣಗಳ ವಿವರ.**

## ಅನುಬಂಧ

| ಕ್ರಮ ಸಂಖ್ಯೆ | ಘಟಕದ ಹೆಸರು | 2023 | 2024 | 2025 |
|---|---|---|---|---|
| 1 | ಬಾಗಲಕೋಟೆ | ಹಿಂದೂ ಜಾಗರಣ ವೇದಿಕೆ-1 | 0 | ಶ್ರೀರಾಮ್ ಸೇನೆ-1 |
| 2 | ಬೆಳಗಾವಿ ಜಿಲ್ಲೆ | 0 | 0 | ಶ್ರೀರಾಮ್ ಸೇನೆ-1<br>ಶ್ರೀರಾಮ್ ಸೇನೆ-1<br>ಶ್ರೀರಾಮ್ ಸೇನೆ-1 |
| 3 | ಚಾಮರಾಜನಗರ | ಕರ್ನಾಟಕ ರಕ್ಷಣಾ ವೇದಿಕೆ-1 | ಬಜರಂಗದಳ-1 | 0 |
| 4 | ಚಿತ್ರದುರ್ಗ | 0 | ಕರುನಾಡ ವಿಜಯ ಸೇನೆ-1<br>ಕರ್ನಾಟಕ ರಕ್ಷಣಾ ವೇದಿಕೆ-1<br>ಕರುನಾಡ ವಿಜಯ ಸೇನೆ-1<br>ಕರುನಾಡ ವಿಜಯ ಸೇನೆ-1 | ಗೋ ಸಂರಕ್ಷಣಾ ಸಂವರ್ಧನ ಸಮಿತಿ-1<br>ಕರ್ನಾಟಕ ನವ ನಿರ್ಮಾಣ ವೇದಿಕೆ-1 |
| 5 | ದಾವಣಗೆರೆ | ಕರ್ನಾಟಕ ರಕ್ಷಣಾ ವೇದಿಕೆ-1 | ರೈತ ಸಂಘಟನೆ-1<br>ಶ್ರೀರಾಮ್ ಸೇನೆ-1<br>ಹಿಂದೂ ಜಾಗರಣ ವೇದಿಕೆ-1 | ರೈತ ಸಂಘಟನೆ-1<br>ರೈತ ಸಂಘಟನೆ-1 |
| 6 | ಹಾವೇರಿ | ರೈತ ಸಂಘಟನೆ-1 | 0 | ರೈತ ಸಂಘಟನೆ-1<br>ರೈತ ಸಂಘಟನೆ-1 |
| 7 | ಮಂಡ್ಯ | ಕರ್ನಾಟಕ ಪ್ರಾಂತ ರೈತ ಸಂಘ-1 | 0 | 0 |
| 8 | ರಾಮನಗರ | ರಾಷ್ಟ್ರ ರಕ್ಷಣೆ ಪಡೆ-1 | 0 | 0 |
| 9 | ಗದಗ | 0 | 0 | ಶ್ರೀರಾಮ್ ಸೇನೆ-1 |
| 10 | ಹಾಸನ | 0 | ಶ್ರೀರಾಮ್ ಸೇನೆ-1 | 0 |
| 11 | ತುಮಕೂರು | 0 | ಬಜರಂಗದಳ-1<br>ಬಜರಂಗದಳ-1<br>ಬಜರಂಗದಳ-1<br>ಬಜರಂಗದಳ-1 | 0 |
| 12 | ಕೊಪ್ಪಳ | 0 | 0 | ಕರ್ನಾಟಕ ರಾಜ್ಯ ಅನ್ನದಾತ್ರರ ರೈತ ಸಂಘ-1 |
| 13 | ಮಂಗಳೂರು ಜಿಲ್ಲೆ | 0 | 0 | ಹಿಂದೂಸಂಘಟನೆ-1 |
| 14 | ಮಂಗಳೂರು ನಗರ | 0 | 0 | ರಾಮಸೇನೆ-1 |
| | **ಒಟ್ಟು** | **06** | **13** | **14** |